| | | | |
|---|---|---|---|
| | ನಿಗದಿಪಡಿಸಿರುವ ಅನುದಾನಕ್ಕೆ ಕ್ರಿಯಾ ಯೋಜನೆ ರೂಪಿಸಿ ಅನುಷ್ಠಾನಗೊಳಿಸಲು ಅನುಮೋದನೆ ನೀಡುವ ಬಗ್ಗೆ. | (see table below) | 2012-13ನೇ ಸಾಲಿಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾರ್ಮಿಕ ಆಯವ್ಯಯಕ್ಕೆ ಸಂಬಂಧಿಸಿದಂತೆ, ಸರ್ಕಾರದಿಂದ ಅನುಮೋದನೆ ಯಾಗಿರುವ ರೂ.97.20ಕೋಟಿಗಳ (ರೂಪಾಯಿ. ತೊಂಬತ್ತೇಳು ಕೋಟಿ ಇಪ್ಪತ್ತು ಲಕ್ಷ ಮಾತ್ರ)ಗಳ ಅನುದಾನಕ್ಕೆ ಅನುಮೋದನೆಯನ್ನು ನೀಡಲು ಮತ್ತು ಸರ್ಕಾರದ ಮಾರ್ಗಸೂಚಿಗಳನ್ವಯ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ತಾಲ್ಲೂಕು ವಾರು ಹಂಚಿಕೆ ಮಾಡಿರುವ ಅನುದಾನಕ್ಕೆ ಸಮನಾಗಿ ಕ್ರಿಯಾ ಯೋಜನೆಯನ್ನು ರೂಪಿಸಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸ ಲಾಯಿತು. |
| | ಇನ್ನಾವುದೇ ವಿಷಯಗಳು ಚರ್ಚೆಗೆ ಬಾರದ ಹಿನ್ನಲೆಯಲ್ಲಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. | | |

| ಕ್ರಮ ಸಂಖ್ಯೆ | ತಾಲ್ಲೂಕು | ವ್ಯಾಲಿಡೇಟೆಡ್ ಜಾಬ್ ಕಾರ್ಡ್ ಗಳು | ಕಾರ್ಮಿಕ ಆಯವ್ಯಯ (ರೂ.ಕೋಟಿಗಳಲ್ಲಿ) |
|---|---|---|---|
| 1 | ಆಲೂರು | 7019 | 4.73 |
| 2 | ಅರಕಲಗೂಡು | 16186 | 10.90 |
| 3 | ಅರಸೀಕೆರೆ | 2389 | 16.08 |
| 4 | ಬೇಲೂರು | 17051 | 11.49 |
| 5 | ಚನ್ನರಾಯಪಟ್ಟಣ | 28979 | 19.27 |
| 6 | ಹಾಸನ | 27053 | 18.48 |
| 7 | ಹೊಳೆನರಸೀಪುರ | 13019 | 8.77 |
| 8 | ಸಕಲೇಶಪುರ | 11152 | 7.51 |

(ಬಿ.ಆರ್.ಸತ್ಯನಾರಾಯಣ),
ಅಧ್ಯಕ್ಷರು,
ಜಿಲ್ಲಾ ಪಂಚಾಯಿತಿ, ಹಾಸನ.

| | | | |
|---|---|---|---|
| | | ಮಕ್ಕಳ ಮನೆ ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಎಲ್ಲಾ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸಭೆಗೆ ಮಾಹಿತಿ ನೀಡಿದರು. | ಸರ್ವಾನುಮತದಿಂದ ನಿರ್ಣಯಿ ಸಲಾಯಿತು. |
| 17 | 2012-13ನೇ ಶೈಕ್ಷಣಿಕ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆ/ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ ಮಂಜೂ ರಾತಿ ಸಂಖ್ಯಾಬಲವನ್ನು ಹೆಚ್ಚಿಸುವ ಬಗ್ಗೆ ಹಾಗೂ ಮೀಸಲಾತಿಯನ್ನು ಅವಶ್ಯಕತೆ ಗನುಗುಣವಾಗಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವ ಬಗ್ಗೆ. | ಮಾನ್ಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷರಾದ ಶ್ರೀ ಎಂ.ಕೆ ದೇವಪ್ಪ ಮಲ್ಲಿಗೆವಾಳುರವರು ಮಾತನಾಡುತ್ತಾ, ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ವತಿಯಿಂದ ನಡೆಯುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ನಿಗದಿತ ಮೀಸಲಾತಿ ಅನುಸಾರವಾಗಿ ಅರ್ಜಿ ಹಾಕಿದ ಪರಿಶಿಷ್ಟ ಜಾತಿ ಮತ್ತು ವರ್ಗದ ವಿದ್ಯಾರ್ಥಿನಿಲಯಗಳಿಗೆ ಅರ್ಜಿ ಹಾಕಿದ ಎಲ್ಲರಿಗೂ ಪ್ರವೇಶ ನೀಡಿ, ಸ್ಥಾನಗಳು ಉಳಿಕೆಯಾದಲ್ಲಿ, ಅಂತಹ ಸಂದರ್ಭದಲ್ಲಿ ಇತರೇ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲು ಕ್ರಮ ವಹಿಸಬೇಕೆಂದು ಕೋರಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ವತಿಯಿಂದ ನಡೆಯುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ ನಿಗದಿತ ಮೀಸಲಾತಿ ಅನುಸಾರವಾಗಿ ಅರ್ಜಿ ಹಾಕಿದ ಪರಿಶಿಷ್ಟ ಜಾತಿ ಮತ್ತು ವರ್ಗದ ವಿದ್ಯಾರ್ಥಿ ನಿಲಯಗಳಿಗೆ ಅರ್ಜಿ ಹಾಕಿದ ಎಲ್ಲರಿಗೂ ಪ್ರವೇಶ ನೀಡಿ, ಸ್ಥಾನಗಳು ಉಳಿಕೆಯಾದಲ್ಲಿ, ಅಂತಹ ಸಂದರ್ಭದಲ್ಲಿ ಇತರೇ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು ಮತ್ತು ಮಂಜೂರಾತಿ ಸಂಖ್ಯೆಗಿಂತ ಹೆಚ್ಚಿನ ಅರ್ಜಿಗಳ ಪ್ರವೇಶ ಕೋರಿ ಬಂದ ಸಂದರ್ಭದಲ್ಲಿ ಅಂತಹವರಿಗೂ ಪ್ರವೇಶ ನೀಡಲು ಸಭೆಯಲ್ಲಿ ನಿರ್ಣಯಿಸಲಾಯಿತು. |
| 18 | 2012-13ನೇ ಸಾಲಿನ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಯಡಿ | ಉಪ ಕಾರ್ಯದರ್ಶಿ (ಅಭಿವೃದ್ಧಿ)ರವರು ಮಾತನಾಡುತ್ತಾ, 2012-13ನೇ ಸಾಲಿಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸರ್ಕಾರದಿಂದ ರೂ.97.20ಕೋಟಿಗಳ ಕಾರ್ಮಿಕ ಮುಂಗಡ ಪತ್ರಕ್ಕೆ ಮಂಜೂರಾತಿ ದೊರೆತಿರುತ್ತದೆ. ಸದರಿ ಅನುದಾನಕ್ಕೆ ಮಾರ್ಗಸೂಚಿಯಂತೆ ಕ್ರಿಯಾ ಯೋಜನೆ ರೂಪಿಸಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡಬೇಕಾಗಿದೆ. ಅದರಂತೆ, ತಾಲ್ಲೂಕುವಾರು ಅನುದಾನವನ್ನು ಹಂಚಿಕೆ ಮಾಡಲಾಗಿದ್ದು ವಿವರಗಳನ್ನು ಕೆಳಕಂಡಂತೆ ನೀಡಲಾಗಿದ್ದ ಸಭೆಯು ಅನುಮೋದನೆ ನೀಡಬೇಕೆಂದು ಕೋರಿದರು. | ಸಭೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು. |

| | | | |
|---|---|---|---|
| 15 | ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಶಾಲಾ ತಡೆಗೋಡೆ ಸೇರಿಸುವ ಬಗ್ಗೆ. | ಮಾನ್ಯ ಸದಸ್ಯರಾದ ಶ್ರೀ ಎನ್.ಡಿ.ಕಿಶೋರ್ ರವರು ಮಾತನಾಡುತ್ತಾ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಉತ್ತಮ ರೀತಿಯ ಶಾಲಾ ತಡೆಗೋಡೆ ಕಾಮಗಾರಿಗಳು ಅನುಷ್ಠಾನ ವಾಗುತ್ತಿದ್ದವು. ಆದರೆ ಪ್ರಸಕ್ತ ಸಾಲಿನಿಂದ ಶಾಲಾ ತಡೆಗೋಡೆ ಕಾಮಗಾರಿಗಳನ್ನು ಕ್ರಿಯಾ ಯೋಜನೆಯಡಿ ಸೇರಿಸಲು ಅವಕಾಶವಿರುವುದಿಲ್ಲ. ಆದ್ದರಿಂದ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಶಾಲಾ ತಡೆಗೋಡೆಗಳನ್ನು ಸೇರಿಸಲು ಅನುಮೋದನೆ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.<br>ಇದಕ್ಕೆ ಎಲ್ಲಾ ಸದಸ್ಯರುಗಳು ತಮ್ಮ ಸಹಮತವನ್ನು ವ್ಯಕ್ತಪಡಿಸಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>2012-13ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಶಾಲಾ ತಡೆಗೋಡೆ ಕಾಮಗಾರಿ ಗಳನ್ನು ಅನುಷ್ಠಾನ ಮಾಡಲು ಅನುಮೋದನೆ ಯನ್ನು ನೀಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯಲ್ಲಿ ಸರ್ವಾನು ಮತದಿಂದ ನಿರ್ಣಯಿಸಲಾಯಿತು. |
| 16 | ಶಾಲಾ ಕಟ್ಟಡಗಳನ್ನು ನೆಲ ಸಮಗೊಳಿಸುವ ಬಗ್ಗೆ | ಮಾನ್ಯ ಸದಸ್ಯರಾದ ಶ್ರೀ ವಿ.ಎ.ನಂಜುಂಡಸ್ವಾಮಿರವರು ಮಾತನಾಡುತ್ತಾ, ಅರಕಲಗೂಡು ತಾಲ್ಲೂಕಿನಲ್ಲಿ ತುಂಬಾ ಹಿಂದೆ ನಿರ್ಮಿಸಿದ ಸರ್ಕಾರಿ ಶಾಲಾ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿದ್ದು, ಬೀಳುವ ಸ್ಥಿತಿಯಲ್ಲಿದ್ದು, ಕಟ್ಟಡಗಳನ್ನು ನೆಲಸಮಗೊಳಿಸುವುದು ಅವಶ್ಯವಿರುತ್ತದೆ. ಆದ್ದರಿಂದ, ಶಿಥಿಲಾವಸ್ಥೆಯಲ್ಲಿರುವ ಸರ್ಕಾರಿ ಶಾಲಾ ಕಟ್ಟಡಗಳನ್ನು ನೆಲಸಮಗೊಳಿಸಲು ಅನುಮೋದನೆ ನೀಡಬೇಕೆಂದು ಕೋರಿದರು.<br>ಮಾನ್ಯ ಸದಸ್ಯರಾದ ಶ್ರೀಮತಿ ಕುಸುಮ ಬಾಲಕೃಷ್ಣರವರು ಮಾತನಾಡುತ್ತಾ, ಪ್ರಸಕ್ತ ಸಾಲಿನಿಂದ ಸರ್ಕಾರಿ ಶಾಲೆಗಳಲ್ಲಿ ಎಲ್.ಕೆ.ಜಿ ಮತ್ತು ಯು.ಕೆ.ಜಿ ತರಗತಿಗಳನ್ನು ಪ್ರಾರಂಭಿಸಲಾಗಿದೆ. ಇದರಿಂದ, ಅಂಗನವಾಡಿ ಕೇಂದ್ರಗಳಲ್ಲಿಯ ಮಕ್ಕಳ ಸಂಖ್ಯೆ ಕಡಿಮೆಯಾಗುವ ಸಾಧ್ಯತೆ ಇರುತ್ತದೆ. ಈ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಬೇಕೆಂದು ಕೋರಿದರು.<br>ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆರವರು ಉತ್ತರಿಸುತ್ತಾ, ಪ್ರಸಕ್ತ ಸಾಲಿನಲ್ಲಿ ಸರ್ಕಾರಿ ಶಾಲೆಗಳಲ್ಲಿ ಎಲ್.ಕೆ.ಜಿ ಮತ್ತು ಯು.ಕೆ.ಜಿ ತರಗತಿಗಳನ್ನು ಪ್ರಾರಂಭ ಮಾಡಿದ್ದು, ಅಂಗನವಾಡಿ ಕೇಂದ್ರಗಳಲ್ಲಿಯೂ ಸಹ 3ರಿಂದ 6 ವರೆಗಿನ ಮಕ್ಕಳಿಗೆ ವಿದ್ಯಾಭ್ಯಾಸ ಸೌಲಭ್ಯವನ್ನು ನೀಡಲಾಗುತ್ತಿದೆ. ಅಂಗನವಾಡಿ ಕೇಂದ್ರವು ಸರ್ಕಾರಿ ಶಾಲಾ ಆವರಣದಲ್ಲಿದ್ದಲ್ಲಿ ಎಲ್.ಕೆ.ಜಿ ಮಕ್ಕಳಿಗೆ ಅಂಗನವಾಡಿ ಕಾರ್ಯಕರ್ತೆಯರು ಶಿಕ್ಷಣವನ್ನು ನೀಡುತ್ತಾರೆ. ಯು.ಕೆ.ಜಿ ಮಕ್ಕಳಿಗೆ ಪ್ರಾಥಮಿಕ ಶಾಲಾ ಶಿಕ್ಷಕರು ಶಿಕ್ಷಣವನ್ನು ನೀಡಲು ತಿಳಿಸಲಾಗಿದೆ. ಈ ಬಗ್ಗೆ ಮಕ್ಕಳ ಮನೆ ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಎಲ್ಲಾ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸಭೆಗೆ ಮಾಹಿತಿ ನೀಡಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಹಾಸನ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಶಾಲಾ ಕಟ್ಟಡಗಳ ಶಿಥಿಲಾವಸ್ಥೆಯಲ್ಲಿದ್ದು, ಬೀಳುವ ಸ್ಥಿತಿಯಲ್ಲಿರುವ ಸರ್ಕಾರಿ ಶಾಲಾ ಕಟ್ಟಡಗಳನ್ನು ಆಯಾ ತಾಲ್ಲೂಕಿನ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿ ಯರಿಂಗ್ ಉಪವಿಭಾಗದವರಿಂದ, ತಾಂತ್ರಿಕ ಅನು ಮೋದನೆ ಪಡೆದು ನೆಲಸಮಗೊಳಿಸುವ ಬಗ್ಗೆ ಶಾಲೆಗಳ ಪಟ್ಟಿಯನ್ನು ಜಿಲ್ಲಾ ಪಂಚಾಯಿತಿಗೆ ಸಲ್ಲಿಸಿ ಅನುಮೋದನೆ ಪಡೆಯುವಂತೆ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆರವರಿಗೆ ಸೂಚಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿ ಸಲಾಯಿತು. |

| | | | |
|---|---|---|---|
| | | ಅಧೀಕ್ಷಕ ಅಭಿಯಂತರರು, ಚಾಮುಂಡೇಶ್ವರಿ ವಿದ್ಯುತ್ ಪ್ರಸರಣ ನಿಗಮ ನಿಯಮಿತರವರು ಉತ್ತರಿಸುತ್ತಾ, ಕುಡಿಯುವ ನೀರಿನ ಯೋಜನೆಗಳಿಗೆ ಸಂಬಂಧಿಸಿದಂತೆ, ಠೇವಣಿ ಕಟ್ಟಿರುವ ಎಲ್ಲಾ ಯೋಜನೆಗಳಿಗೆ ವಿದ್ಯುದ್ದೀಕರಣ ಸೌಲಭ್ಯವನ್ನು ಒದಗಿಸುವ ಕಾಮಗಾರಿಗಳನ್ನು ಅನುಷ್ಠಾನ ಮಾಡಲಾಗುತ್ತಿದ್ದು, ತ್ವರಿತವಾಗಿ ಪೂರ್ಣಗೊಳಿಸಲಾಗುವುದು ಎಂದು ಸಭೆಗೆ ಮಾಹಿತಿ ನೀಡಿದರು.<br>ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡುತ್ತಾ, ಶ್ರೀ.ಬಿ.ಎನ್.ರಾಮಚಂದ್ರ (ಬೈರಮುಡಿ ಚಂದ್ರು) ಮತ್ತು ಶ್ರೀಮತಿ ಪಾರ್ವತಮ್ಮರವರು ಪ್ರಸ್ತಾಪಿಸಿರುವ ವಿಷಯಗಳು ತುಂಬಾ ಗಂಭೀರವಾಗಿದ್ದು, ಸಾರ್ವಜನಕರಿಗೆ ಇದರಿಂದ ತುಂಬಾ ತೊಂದರೆಯಾಗುತ್ತಿದೆ. ಆದ್ದರಿಂದ ಅಧೀಕ್ಷಕ ಅಭಿಯಂತರರು, ಚಾಮುಂಡೇಶ್ವರಿ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಹಾಸನ ಇವರು ತಮ್ಮ ಅಧೀನದಲ್ಲಿ ಕೆಲಸ ನಿರ್ವಹಿಸುವ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ಕ್ರಮ ವಹಿಸಬೇಕೆಂದು ತಿಳಿಸಿದರು. | |
| 14 | ಅಂಗನವಾಡಿ ಕೇಂದ್ರದ ಕಟ್ಟಡಗಳ ನಿರ್ಮಾಣದ ಬಗ್ಗೆ | ಮಾನ್ಯ ಸದಸ್ಯರಾದ ಶ್ರೀ ವಿ.ಎ.ನಂಜುಂಡಸ್ವಾಮಿರವರು ಮಾತನಾಡುತ್ತಾ, 2009-10ನೇ ಸಾಲಿನಲ್ಲಿ ನಬಾರ್ಡ್ ವತಿಯಿಂದ ಜಿಲ್ಲೆಗೆ ಮಂಜೂರಾದ ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ, ಅನುದಾನವನ್ನು ಕರ್ನಾಟಕ ಮೂಲ ಸೌಕರ್ಯಗಳ ಅಭಿವೃದ್ಧಿ ಇಲಾಖೆರವರಿಗೆ ಬಿಡುಗಡೆ ಮಾಡಿದ್ದು, ಸದರಿಯವರು ಘಟಕ ವೆಚ್ಚ ಕಡಿಮೆಯಿದೆಯೆಂದು ಇಲ್ಲಿಯವರಗೆ ಕಟ್ಟಡ ಕಾಮಗಾರಿಗಳನ್ನು ಅನುಷ್ಠಾನ ಮಾಡಿರುವುದಿಲ್ಲ. ಆದ್ದರಿಂದ, ಈ ಬಗ್ಗೆ ಕ್ರಮ ವಹಿಸಬೇಕೆಂದು ಕೋರಿದರು.<br>ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡುತ್ತಾ, ನಬಾರ್ಡ್ ವತಿಯಿಂದ ನಿಗದಿಪಡಿಸಿರುವ ಘಟಕ ವೆಚ್ಚ ರೂ.3.61ಲಕ್ಷಗಳು ಕಡಿಮೆಯಾಗಿದ್ದು, ನಬಾರ್ಡ್ ನಿಗದಿಪಡಿಸಿರುವ ನಕ್ಷೆಯಂತೆ ರೂ.3.61ಲಕ್ಷಗಳಲ್ಲಿ ಕಟ್ಟಡವನ್ನು ನಿರ್ಮಾಣ ಮಾಡುವುದು ಸಾಧ್ಯವಿಲ್ಲವೆಂದು ತಿಳಿಸಿರುವ ಹಿನ್ನೆಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ 13ನೇ ಹಣಕಾಸು ಯೋಜನೆಯಲ್ಲಿ ಅವಶ್ಯವಿರುವ ಹಣವನ್ನು ಭರಿಸಿ ಕಟ್ಟಡ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು. ಇದಕ್ಕೆ ಎಲ್ಲಾ ಜಿಲ್ಲಾ ಪಂಚಾಯಿತಿ ಸದಸ್ಯರುಗಳ ಸಹಕಾರ ಅಗತ್ಯವಾಗಿರುತ್ತದೆ ಎಂದು ಸಭೆಗೆ ವಿವರ ನೀಡಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>2009-10ನೇ ಸಾಲಿಗೆ ಮಂಜೂರಾಗಿ ಕರ್ನಾಟಕ ಮೂಲ ಸೌಕರ್ಯಗಳ ಅಭಿವೃದ್ಧಿ ಇಲಾಖೆಯ ವತಿಯಿಂದ ಅನುಷ್ಠಾನ ಮಾಡದೇ ಇರುವ ಅಂಗನವಾಡಿ ಕಟ್ಟಡಗಳಿಗೆ ನಬಾರ್ಡ್ ವತಿಯಿಂದ ನಿಗದಿಪಡಿಸಿರುವ ಅನುದಾನ ಕಡಿಮೆಯಿರುವುದರಿಂದ, ಕಟ್ಟಡ ಕಾಮಗಾರಿಗೆ ಅವಶ್ಯವಿರುವ ಹೆಚ್ಚುವರಿ ಮೊತ್ತವನ್ನು ಭರಿಸಿ ಕಾಮಗಾರಿಗಳನ್ನು ಪೂರ್ಣಗೊಳಿಸುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ತೀರ್ಮಾನಿಸುವ ಅಧಿಕಾರವನ್ನು ಮಾನ್ಯ ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ, ಇವರಿಗೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |

| | | | |
|---|---|---|---|
| | | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡುತ್ತಾ, ಮಾನ್ಯ ಸದಸ್ಯರು ಕೋರಿರುವಂತೆ ಮಕ್ಕಳ ವಿದ್ಯಾಭ್ಯಾಸದ ಹಿತದೃಷ್ಟಿಯಿಂದ ಖಾಲಿ ಉಳಿಯುವ ಅಲ್ಪಸಂಖ್ಯಾತ ಮಕ್ಕಳ ಸ್ಥಾನಗಳಿಗೆ ಬೇರೆ ಜನಾಂಗದ ಮಕ್ಕಳನ್ನು ಸೇರಿಸಲು ಅವಕಾಶ ಮಾಡಿಕೊಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯು ಅನುಮೋದನೆ ನೀಡಬೇಕೆಂದು ಕೋರಿದರು.<br>ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಜಿಲ್ಲೆಯಲ್ಲಿ ನಡೆಯುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಖಾಲಿ ಉಳಿಯುವ ಸ್ಥಾನಗಳಿಗೆ ಬೇರೆ ಜನಾಂಗದ ಮಕ್ಕಳಿಗೆ ಅವಕಾಶ ನೀಡಿದಲ್ಲಿ ಗ್ರಾಮೀಣ ಪ್ರದೇಶದ ಆರ್ಥಿಕವಾಗಿ ಹಿಂದುಳಿದಿರುವ ಮಕ್ಕಳ ವ್ಯಾಸಂಗಕ್ಕೆ ಬಹಳ ಅನುಕೂಲವಾಗುತ್ತದೆ. ಆದ್ದರಿಂದ, ಜಿಲ್ಲೆಯಲ್ಲಿ ನಡೆಯುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಖಾಲಿ ಉಳಿಯುವ ಸ್ಥಾನಗಳಿಗೆ ಬೇಡಿಕೆಗನುಗುಣವಾಗಿ ಮಕ್ಕಳನ್ನು ಸೇರಿಸಲು ಅನುಮೋದನೆ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮ ವಹಿಸುವಂತೆ ತಿಳಿಸಿದರು. | |
| 13 | ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುದ್ದೀಕರಣ ಸೌಲಭ್ಯ ಒದಗಿಸುವ ಬಗ್ಗೆ. | ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ಗುರುದೇವ್ ರವರು ಮಾತನಾಡುತ್ತಾ, ಕುಡಿಯುವ ನೀರಿನ ಯೋಜನೆಗಳಿಗೆ ಚಾಮುಂಡೇಶ್ವರಿ ವಿದ್ಯುತ್ ಪ್ರಸರಣ ನಿಗಮ ನಿಯಮಿತರವರ ವತಿಯಿಂದ ವಿದ್ಯುದ್ದೀಕರಣ ಸೌಲಭ್ಯವನ್ನು ಒದಗಿಸಿರುವುದಿಲ್ಲ. ಇದರಿಂದ, ಸಾರ್ವಜನಿಕರಿಗೆ ಕುಡಿಯುವ ನೀರಿನ ಸೌಲಭ್ಯ ಲಭ್ಯವಾಗುತ್ತಿಲ್ಲ. ಈ ಬಗ್ಗೆ ಮಾಹಿತಿಯನ್ನು ಒದಗಿಸಬೇಕೆಂದು ಕೋರಿದರು.<br>ಮಾನ್ಯ ಸದಸ್ಯರಾದ ಶ್ರೀ ಪುರುಷೋತ್ತಮರವರೂ ಸಹ ತಮ್ಮ ಸಹಮತವನ್ನು ವ್ಯಕ್ತಪಡಿಸಿದರು.<br>ಮಾನ್ಯ ಸದಸ್ಯರಾದ ಶ್ರೀ ಬಿ.ಎನ್.ರಾಮಚಂದ್ರ (ಬೈರಮುಡಿ ಚಂದ್ರು)ರವರು ಮಾತನಾಡುತ್ತಾ, ಚಾಮುಂಡೇಶ್ವರಿ ವಿದ್ಯುತ್ ಪ್ರಸರಣ ನಿಗಮ ನಿಯಮಿತರವರ ವತಿಯಿಂದ ಕಾಮಗಾರಿಗಳನ್ನು ಅನುಷ್ಠಾನ ಮಾಡುವಾಗ, ಅಧಿಕಾರಿಗಳು ಗ್ರಾಮಸ್ಥರಿಂದ ಅನೇಕ ಕೆಲಸಗಳನ್ನು ಮಾಡಿಸುತ್ತಿರುವುದು ಕಂಡುಬರುತ್ತಿದೆ. ಈ ಬಗ್ಗೆ ಪರಿಶೀಲಿಸಿ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಕೋರಿದರು.<br>ಮಾನ್ಯ ಸದಸ್ಯರಾದ ಶ್ರೀಮತಿ ಪಾರ್ವತಮ್ಮರವರು ಮಾತನಾಡುತ್ತಾ, ನನ್ನ ಕ್ಷೇತ್ರದಲ್ಲಿ ವಿದ್ಯುತ್ ಕಂಬಗಳು ಶಿಥಿಲಗೊಂಡಿದ್ದು, ಬೀಳುವ ಸ್ಥಿತಿಯಲ್ಲಿವೆ. ಇದರಿಂದ, ಸಾರ್ವಜನಿಕರು/ ಜಾನುವಾರುಗಳಿಗೆ ಅಪಾಯವಿದೆ. ಈ ಬಗ್ಗೆ ಅನೇಕ ಬಾರಿ ಚಾಮುಂಡೇಶ್ವರಿ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಅಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಲಾಗಿದೆ. ಆದರೆ, ಇಲ್ಲಿಯವರೆಗೆ ಕಂಬಗಳನ್ನು ತೆರವುಗೊಳಿಸಿ, ಹೊಸ ಕಂಬಗಳನ್ನು ಹಾಕುವ ವ್ಯವಸ್ಥೆಯನ್ನು ಮಾಡಿರುವುದಿಲ್ಲ. ಆದ್ದರಿಂದ ಕಂಬಗಳನ್ನು ತೆರವುಗೊಳಿಸುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಕೋರಿದರು. | ಸಭೆಯಲ್ಲಿ ಚರ್ಚಿಸಿದಂತೆ, ಕುಡಿಯುವ ನೀರಿನ ಯೋಜನೆಗಳಿಗೆ ತ್ವರಿತವಾಗಿ ವಿದ್ಯುದ್ದೀಕರಣ ಸೌಲಭ್ಯವನ್ನು ಒದಗಿಸುವಂತೆ ಮತ್ತು ಶಿಥಿಲಾವಸ್ಥೆಯಲ್ಲಿರುವ ವಿದ್ಯುತ್ ಕಂಬಗಳನ್ನು ತೆರವುಗೊಳಿಸಿ ಹೊಸ ಕಂಬಗಳನ್ನು ಹಾಕುವ ಬಗ್ಗೆ ಅಗತ್ಯ ಕ್ರಮ ವಹಿಸುವಂತೆ ಅಧೀಕ್ಷಕ ಅಭಿಯಂತರರು, ಚಾಮುಂಡೇಶ್ವರಿ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಹಾಸನ ಇವರಿಗೆ ತಿಳಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |

| | | | |
|---|---|---|---|
| | | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಉತ್ತರಿಸುತ್ತಾ, ಅರೇಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೊಸ ಕಟ್ಟಡ ಮಂಜೂರಾಗಿದ್ದು, ಶವಾಗಾರವನ್ನು ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗಿದೆ ಮತ್ತು ಜಾವಗಲ್ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೊಸದಾಗಿ ಶವಾಗಾರ ಕಟ್ಟಡವನ್ನು ಮಂಜೂರು ಮಾಡುವಂತೆ ಕೇಂದ್ರ ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಎಂದು ಸಭೆಗೆ ವಿವರ ನೀಡಿದರು.<br>ಮಾನ್ಯ ಸದಸ್ಯರಾದ ಶ್ರೀ ಬಿ.ಡಿ.ಚಂದ್ರೇಗೌಡರವರು ಮಾತನಾಡುತ್ತಾ, ಬೇಲೂರು ತಾಲ್ಲೂಕು ಆಸ್ಪತ್ರೆಯಲ್ಲಿ ಕೇವಲ 2 ಜನ ಮಾತ್ರ ವೈದ್ಯರಿದ್ದಾರೆ. ವೈದ್ಯರನ್ನು ನಿಯೋಜನೆ ಮಾಡಲು ಕ್ರಮ ವಹಿಸಬೇಕೆಂದು ಕೋರಿದರು.<br>ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡುತ್ತಾ, ಜಿಲ್ಲೆಯಲ್ಲಿ 64 ಜನ ತಜ್ಞವೈದ್ಯರ ಕೊರತೆಯಿದೆ. ಇದಲ್ಲದೆ, ಆಯುಕ್ತರು ವೈದ್ಯರ ನೇಮಕಾತಿ ಮಾಡಿದ್ದರೂ ಸಹ ಜಿಲ್ಲೆಗೆ ವೈದ್ಯರು ಬರುತ್ತಿಲ್ಲ. ಹೊಸದಾಗಿ ಪ್ರಾರಂಭವಾಗಿರುವ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವತಿಯಿಂದ ಹೊರಬರುವ ಎಂ.ಬಿ.ಬಿ.ಎಸ್ ವೈದ್ಯರುಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಒಂದು ವರ್ಷ ಕಡ್ಡಾಯವಾಗಿ ಸೇವೆ ಸಲ್ಲಿಸುವ ಷರತ್ತಿನೊಂದಿಗೆ ನಿಯೋಜನೆ ಮಾಡಲಾಗುವುದು ಎಂದು ಸಭೆಗೆ ವಿವರ ನೀಡಿದರು. | |
| 12 | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಅರಕಲಗೂಡು ಇಲ್ಲಿ ಖಾಲಿ ಉಳಿಯುವ ಸ್ಥಾನಗಳಿಗೆ ವಿದ್ಯಾರ್ಥಿಗಳನ್ನು ತುಂಬುವ ಬಗ್ಗೆ | ಮಾನ್ಯ ಸದಸ್ಯರಾದ ಶ್ರೀ ವಿ.ಎ.ನಂಜುಂಡಸ್ವಾಮಿರವರು ಮಾತನಾಡುತ್ತಾ, ಅರಕಲಗೂಡು ಪಟ್ಟಣದಲ್ಲಿ ನಡೆಯುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಮಂಜೂರಾಗಿರುವ ಸಂಖ್ಯಾ ಬಲದಲ್ಲಿ ಅಲ್ಪಸಂಖ್ಯಾತರಾದ ಬೌದ್ಧ, ಜೈನ ಮತ್ತು ಇತರೇ ಅಲ್ಪಸಂಖ್ಯಾತರ ಮಕ್ಕಳುಗಳು ಲಭ್ಯವಿಲ್ಲದೇ ಸ್ಥಾನಗಳು ಖಾಲಿ ಉಳಿದಿರುತ್ತವೆ. ಆದರೆ, ಬೇರೆ ಜನಾಂಗದ ಮಕ್ಕಳಿಗೆ ಸೀಟುಗಳು ಹೆಚ್ಚಿನ ಸಂಖ್ಯೆಯಲ್ಲಿ ಲಭ್ಯವಿರುವುದಿಲ್ಲ. ಆದ್ದರಿಂದ, ಖಾಲಿ ಉಳಿಯುವ ಅಲ್ಪಸಂಖ್ಯಾತರ ಸ್ಥಾನಗಳಿಗೆ ಬೇರೆ ಜನಾಂಗದ ಮಕ್ಕಳಿಗೆ ಅವಕಾಶ ಮಾಡಿಕೊಟ್ಟಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಈ ಬಗ್ಗೆ ಸರಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕೆಂದು ಕೋರಿದರು.<br>ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆರವರು ಮಾತನಾಡುತ್ತಾ, ಸರ್ಕಾರದಿಂದ ಅಲ್ಪಸಂಖ್ಯಾತ ಮಕ್ಕಳು ಲಭ್ಯವಿಲ್ಲದಿದ್ದಲ್ಲಿ ಖಾಲಿ ಸ್ಥಾನಗಳಿಗೆ ಬೇರೆ ಜನಾಂಗದ ಮಕ್ಕಳನ್ನು ಸೇರಿಸಬಾರದೆಂದು ಸುತ್ತೋಲೆಯಲ್ಲಿ ಕಟ್ಟುನಿಟ್ಟಿನ ನಿರ್ದೇಶನ ನೀಡಿರುತ್ತಾರೆ. ಆದ್ದರಿಂದ, ನಮ್ಮ ಹಂತದಲ್ಲಿ ಕ್ರಮ ತೆಗೆದುಕೊಳ್ಳಲು ಅವಕಾಶವಿಲ್ಲವೆಂದು ಸಭೆಗೆ ಮಾಹಿತಿ ನೀಡಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಹಾಸನ ಜಿಲ್ಲೆಯಲ್ಲಿ ನಡೆಯುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಖಾಲಿ ಉಳಿಯುವ ಮಕ್ಕಳ ಸ್ಥಾನಗಳಿಗೆ ಬೇಡಿಕೆ ಗನುಗುಣವಾಗಿ ಬೇರೆ ಜನಾಂಗದ ಮಕ್ಕಳನ್ನು ಸೇರಿಸಲು ಅನುಮೋದನೆಯನ್ನು ನೀಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |

| | | | |
|---|---|---|---|
| | | ಅನುದಾನವನ್ನು ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು ಸೂಕ್ತವಾಗಿರುತ್ತದೆ. ಆದ್ದರಿಂದ, ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವ ಬಗ್ಗೆ ಸಭೆಯ ಅನುಮೋದನೆ ಅಗತ್ಯವಾಗಿರುತ್ತದೆ ಎಂದು ಸಭೆಗೆ ವಿವರ ನೀಡಿದರು.<br>ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ಗುರುದೇವರವರು ಮಾತನಾಡುತ್ತಾ, ಆಲೂರು ತಾಲ್ಲೂಕಿನಲ್ಲಿಯೂ ಸಹ ಬಹುಗ್ರಾಮ ಯೋಜನೆಯಡಿ ಕುಡಿಯುವ ನೀರಿನ ಯೋಜನೆಗಳನ್ನು ಅನುಷ್ಠಾನ ಮಾಡುವುದು ಅಗತ್ಯವಾಗಿದ್ದು, ಇಲ್ಲಿಯವರೆಗೆ ಯಾವುದೇ ಕ್ರಮ ವಹಿಸಿರುವುದಿಲ್ಲ. ಆದ್ದರಿಂದ, ಈ ಬಗ್ಗೆ ಕ್ರಮ ವಹಿಸಬೇಕೆಂದು ಕೋರಿದರು.<br>ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡುತ್ತಾ, ಮೈಸೂರು ಜಿಲ್ಲೆಯಲ್ಲಿ ಹೈಡ್ರೋಫ್ರಾಕ್ಚರಿಂಗ್ ಯಶಸ್ವಿಯಾಗಿದೆ. ಅದೇ ರೀತಿಯಲ್ಲಿ ಹಾಸನ ಜಿಲ್ಲೆಯಲ್ಲಿಯೂ ಸಹ ಹೈಡ್ರೋಫ್ರಾಕ್ಚರಿಂಗ್ ಮಾಡಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.<br>ಮಾನ್ಯ ಸದಸ್ಯರಾದ ಶ್ರೀ ಬಿ.ಎನ್.ರಾಮಚಂದ್ರ (ಬೈರಮುಡಿ ಚಂದ್ರು) ರವರು ಮಾತನಾಡುತ್ತಾ, ಸಕಲೇಶಪುರ ತಾಲ್ಲೂಕಿನಲ್ಲಿ ಅನುಷ್ಠಾನ ಮಾಡುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಅವಶ್ಯ ಸಾಮಗ್ರಿಗಳನ್ನು ಬೇರೆ ಬೇರೆ ತಾಲ್ಲೂಕುಗಳಿಂದ ಸರಬರಾಜು ಮಾಡಬೇಕಾಗಿರುತ್ತದೆ. ಆದ್ದರಿಂದ, ಕಾಮಗಾರಿಗಳಿಗೆ ಹೆಚ್ಚಿನ ಹಣ ವ್ಯಯವಾಗುತ್ತದೆ. ಆದ್ದರಿಂದ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ವತಿಯಿಂದ ಅನುಷ್ಠಾನ ಮಾಡುವ ಕಾಮಗಾರಿಗಳಿಗೆ ಎಸ್.ಆರ್ ದರಗಳನ್ನು ಪರಿಷ್ಕರಣೆ ಮಾಡುವುದು ಅಗತ್ಯವಾಗಿದ್ದು, ಈ ಬಗ್ಗೆ ಕ್ರಮ ವಹಿಸಬೇಕೆಂದು ಕೋರಿದರು.<br>ಮಾನ್ಯ ಸದಸ್ಯರಾದ ಶ್ರೀ ಅಮಿತ್ ಕುಮಾರ್ ಶೆಟ್ಟಿರವರು ಮಾತನಾಡುತ್ತಾ, ಸಕಲೇಶಪುರ ತಾಲ್ಲೂಕಿನ ಎತ್ತಿನಹಳ್ಳದಿಂದ ಬೇರೆ ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಕೆಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಆದರೆ, ಹಾಸನ ಜಿಲ್ಲೆಯ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಇದೆ. ಆದ್ದರಿಂದ, ಎತ್ತಿನಹಳ್ಳ ಯೋಜನೆಯಡಿ ಹಾಸನ ಜಿಲ್ಲೆಗೂ ನೀರಿನ ಸೌಲಭ್ಯವನ್ನು ಒದಗಿಸುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.<br>ಮಾನ್ಯ ಸದಸ್ಯರಾದ ಶ್ರೀ ಈಶ್ವರಹಳ್ಳಿ ಲಕ್ಷ್ಮಣ್ ರವರು ಮಾತನಾಡುತ್ತಾ, ಹಿಂದಿನ ಸಾಮಾನ್ಯ ಸಭೆಯಲ್ಲಿ ಆರೇಹಳ್ಳಿ ಮತ್ತು ಜಾವಗಲ್ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಶವಾಗಾರವನ್ನು ನಿರ್ಮಿಸುವ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಈ ಬಗ್ಗೆ ಏನು ಕ್ರಮ ವಹಿಸಲಾಗಿದೆ ಎಂಬ ಕುರಿತು ಮಾಹಿತಿಯನ್ನು ನೀಡಬೇಕೆಂದು ಕೋರಿದರು. | |

ಮಾನ್ಯ ಸದಸ್ಯರಾದ ಶ್ರೀ ವಿ.ಎ.ನಂಜುಂಡಸ್ವಾಮಿರವರು ಮಾತನಾಡುತ್ತಾ, ಪ್ರತಿ ಗ್ರಾಮಗಳಲ್ಲಿಯೂ ಜನಸಂಖ್ಯೆ ಹೆಚ್ಚಾದಂತೆಲ್ಲಾ ಬಡಾವಣೆಗಳು ನಿರ್ಮಾಣವಾಗುತ್ತಿವೆ. ಸದರಿ ಬಡಾವಣೆಗಳಿಗೂ ಸಹ ಕುಡಿಯುವ ನೀರಿನ ಸೌಲಭ್ಯವನ್ನು ನೀಡಬೇಕಾಗಿರುತ್ತದೆ. ಆದರೆ, ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಪೈಪ್ ಲೈನ್ ಕಾಮಗಾರಿಗೆ ಅವಕಾಶವಿಲ್ಲ ಎಂದು ಮಾಹಿತಿ ಇರುತ್ತದೆ. ಇದರಿಂದ, ಹೊಸ ಬಡಾವಣೆಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲು ಸಾಧ್ಯವಾಗುವುದಿಲ್ಲ. ಅಲ್ಲದೆ, 2009-10 ಮತ್ತು 2010-11ನೇ ಸಾಲಿನ ಮುಂದುವರೆದ ಕಾಮಗಾರಿಗಳಿದ್ದು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳ ವತಿಯಿಂದ ಅನುಷ್ಠಾನ ಮಾಡಿರುವುದಿಲ್ಲ ಮತ್ತು ವಿಫಲವಾಗಿರುವ ಕೊಳವೆ ಬಾವಿಗಳಿಗೆ ಹೊಸದಾಗಿ ಕೊಳವೆ ಬಾವಿಗಳನ್ನು ಕೊರೆದಿರುವುದಿಲ್ಲ. ಆದ್ದರಿಂದ, ಕುಡಿಯುವ ನೀರಿನ ಯೋಜನೆಯಡಿ ಪೈಪ್ ಲೈನ್ ಕಾಮಗಾರಿಗಳನ್ನು ಐ.ಎಂ.ಐ.ಎಸ್ ಅಡಿಯಲ್ಲಿ ದಾಖಲಿಸಿ ಅನುಷ್ಠಾನ ಮಾಡಲು ಕ್ರಮ ವಹಿಸಬೇಕೆಂದು ಕೋರಿದರು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಬರಪರಿಹಾರ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಬರಪೀಡಿತ ಪ್ರದೇಶಗಳಲ್ಲಿ ಕುಡಿಯುವ ನೀರನ ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ ಕುಡಿಯುವ ನೀರಿನ ಯೋಜನೆಗಳನ್ನು ಅನುಷ್ಠಾನ ಮಾಡಲು ಜಿಲ್ಲಾಧಿಕಾರಿಯವರಲ್ಲಿ ಬರಪರಿಹಾರ ಕಾಮಗಾರಿಗಳ **ಯೋಜನೆಯಡಿಯಲ್ಲಿ ರೂ.240.00ಲಕ್ಷಗಳು** ಲಭ್ಯವಿದ್ದು, ಸದರಿ ಅನುದಾನದಲ್ಲಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ ರೂ.1.00ಕೋಟಿಗಳ ಅನುದಾನವನ್ನು ನೀಡಲು ಜಿಲ್ಲಾಧಿಕಾರಿಯವರಿಗೆ ಸೂಚಿಸುವುದಾಗಿ ತಿಳಿಸಿರುತ್ತಾರೆ. ಈ ಬಗ್ಗೆ ಜಿಲ್ಲಾಧಿಕಾರಿಯವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮ ವಹಿಸಬೇಕೆಂದು ತಿಳಿಸಿದರು

ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡುತ್ತಾ, ಟಾಸ್ಕ್ ಫೋರ್ಸ್ ಅಡಿಯಲ್ಲಿ ಮಾನ್ಯ ಶಾಸಕರುಗಳಿಗೆ ಅನುದಾನವನ್ನು ಬಿಡುಗಡೆ ಮಾಡಿದ್ದು, ಜಿಲ್ಲಾಪಂಚಾಯಿತಿ ಸದಸ್ಯರುಗಳು ಮಾನ್ಯ ಶಾಸಕರುಗಳ ಗಮನಕ್ಕೆ ತಂದು ತೀವ್ರ ಸಮಸ್ಯೆಯಿರುವ ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆಗಳನ್ನು ಅನುಷ್ಠಾನ ಮಾಡಲು ಅವಕಾಶವಿದೆ. ಆದರೆ, ಶಾಸಕರು ಜಿಲ್ಲಾ ಪಂಚಾಯತ್ ಸದಸ್ಯರುಗಳ ಕೋರಿಕೆಗೆ ಕೆಲವೊಂದು ಸಂದರ್ಭಗಳಲ್ಲಿ ಮನ್ನಣೆ ದೊರೆಯದಿದ್ದಾಗ ಜಿಲ್ಲಾ ಪಂಚಾಯಿತಿ ಸದಸ್ಯರ ಅಗತ್ಯವಾಗಿ ಕುಡಿಯುವ ನೀರಿನ ಬೇಡಿಕೆಗಳಲ್ಲಿ ಇವುಗಳನ್ನು ಪೂರೈಸಲು, ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಸಾರ್ವಜನಿಕರಿಂದ ಕೋರಿಕೆ ಬಂದಾಗ, ಪ್ರವಾಸದ ಸಮಯದಲ್ಲಿ ಖುದ್ದಾಗಿ ಗಮನಿಸಿದ ಕಡೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಲ್ಲಿ ಪರಿಹರಿಸಲು ಟಾಸ್ಕ್ ಫೋರ್ಸ್ ಅಡಿಯಲ್ಲಿ ಜಿಲ್ಲಾ ಪಂಚಾಯಿತಿಗೆ ಪ್ರತ್ಯೇಕವಾಗಿ ರೂ.1.00ಕೋಟಿಗಳ

| | | | |
|---|---|---|---|
| | ವಾಗಿ ಜಿಲ್ಲೆಯಾದ್ಯಂತ ಇರುವ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಅನುಷ್ಠಾನ ಗೊಳಿಸುವ ಬಗ್ಗೆ. | 2012-13ನೇ ಸಾಲಿನಲ್ಲಿಯೂ ಸಹ ಸರ್ಕಾರಿ ಶಾಲೆಗಳಲ್ಲಿ ಈ ಪ್ರಾಜೆಕ್ಟ್ ಅನ್ನು ಅನುಷ್ಠಾನ ಮಾಡುವುದು ಸೂಕ್ತವಾಗಿರುತ್ತದೆ. ಆದ್ದರಿಂದ, ಪ್ರಸಕ್ತ ಸಾಲಿನಲ್ಲಿ 240 ಸರ್ಕಾರಿ ಶಾಲೆಗಳಲ್ಲಿ 1947 ಪ್ರಾಜೆಕ್ಟ್ ಅನ್ನು ಅನುಷ್ಠಾನ ಮಾಡಲು ಸಭೆಯು ಅನುಮೋದನೆಯನ್ನು ನೀಡಬೇಕೆಂದು ಕೋರಿದರು. | ಮೂವ್ ಮೆಂಟ್ ವತಿಯಿಂದ ಅನುಷ್ಠಾನ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ನೀಡಲು ನಿರ್ಣಯಿಸಲಾಯಿತು. |
| 11 | ಕುಡಿಯುವ ನೀರಿನ ಯೋಜನೆ ಗಳ ಬಗ್ಗೆ | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡುತ್ತಾ, 2012-13ನೇ ಸಾಲಿಗೆ ರೂ.4641.86ಲಕ್ಷಗಳ ಅನುದಾನ ನಿಗದಿಯಾಗಿದ್ದು, ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ತಯಾರಿಸಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಮಾನ್ಯ ಜಿಲ್ಲಾ ಪಂಚಾಯಿತಿ ಸದಸ್ಯರುಗಳು ಅಗತ್ಯ ಇರುವ ಕುಡಿಯುವ ನೀರಿನ ಕಾಮಗಾರಿಗಳ ಪಟ್ಟಿಯನ್ನು ನೀಡುವಾಗ, ಕಿರುನೀರು ಸರಬರಾಜು ಯೋಜನೆ ಮತ್ತು ಪೈಪ್ ಲೈನ್ ಕಾಮಗಾರಿ ಹಾಗೂ ನಳನೀರು ಸರಬರಾಜು ಯೋಜನೆ ಮತ್ತು ಪೈಪ್ ಲೈನ್ ಕಾಮಗಾರಿ ಎಂದು ನೀಡಬೇಕೆಂದು ಕೋರಿದರು. ಬಹುಗ್ರಾಮ ಯೋಜನೆಯಡಿ ಗ್ರಾಮೀಣ ಪ್ರದೇಶಗಳಿಗೆ ಶಾಶ್ವತವಾಗಿ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರವನ್ನು ಒದಗಿಸಬಹುದಾಗಿದ್ದು, ಜಿಲ್ಲೆಯಲ್ಲಿ 4 ನದಿಗಳು ಹರಿಯುತ್ತಿದ್ದು, ಬೇಲೂರು, ಸಕಲೇಶಪುರ, ಆಲೂರು, ಅರಕಲಗೂಡು ತಾಲ್ಲೂಕಿನ ಗ್ರಾಮಗಳಿಗೆ ಬಹುಗ್ರಾಮ ಯೋಜನೆಯಡಿ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲು ಉದ್ದೇಶಿಸಲಾಗಿದ್ದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ತಾಂತ್ರಿಕ ಪರಿಣಿತರನ್ನು ಹೊಂದಿರುವ 6-7 ಸಂಸ್ಥೆಗಳನ್ನು ಗುರುತಿಸಿರುತ್ತಾರೆ. ಸದರಿ ಸಂಸ್ಥೆಗಳ ತಾಂತ್ರಿಕ ಪರಿಣಿತರ ವತಿಯಿಂದ ಜಿಲ್ಲೆಯಲ್ಲಿ 15 ರಿಂದ 20 ಬಹುಗ್ರಾಮ ಯೋಜನೆಗಳನ್ನು ರೂ.3.00ರಿಂದ 5.00ಕೋಟಿಗಳ ಅಂದಾಜಿನಲ್ಲಿ ಅನುಷ್ಠಾನ ಮಾಡಲು ಸರ್ವೆ ಕಾರ್ಯನಡೆಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ತೀರ್ಮಾನಿಸಲಾಗಿದ್ದು, ಜುಲೈ ಮಾಹೆಯಿಂದ ಪ್ರಾರಂಭ ಮಾಡಲಾಗುವುದು ಎಂದು ಸಭೆಗೆ ವಿವರ ನೀಡಿದರು.<br>ಮಾನ್ಯ ಸದಸ್ಯರಾದ ಶ್ರೀ ಈಶ್ವರಹಳ್ಳಿ ಲಕ್ಷ್ಮಣ್ ರವರು ಮಾತನಾಡುತ್ತಾ, ನನ್ನ ಜಿಲ್ಲಾ ಪಂಚಾಯಿತಿ ಕ್ಷೇತ್ರದಲ್ಲಿ ಈಗಾಗಲೇ 16 ಕೊಳವೆ ಬಾವಿಗಳನ್ನು ಕೊರೆಯಲಾಗಿದ್ದು, ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ. ಈ ಬಗ್ಗೆ ಅನೇಕಬಾರಿ ಮನವಿಯನ್ನು ಸಲ್ಲಿಸಲಾಗಿದ್ದರೂ ಸಹ ಇಲ್ಲಿಯವರೆಗೂ ಯಾವುದೇ ಹಣವನ್ನು ನೀಡಿರುವುದಿಲ್ಲ. ಈ ಬಗ್ಗೆ ಮೊದಲು ಕ್ರಮ ತೆಗೆದುಕೊಂಡು ಅವಶ್ಯ ಅನುದಾನವನ್ನು ನೀಡಬೇಕೆಂದು ಕೋರಿದರು.<br>ಮಾನ್ಯ ಸದಸ್ಯರಾದ ಶ್ರೀ ಹುಚ್ಚೇಗೌಡರು ಮಾತನಾಡುತ್ತಾ, ಅರಸೀಕೆರೆ ತಾಲ್ಲೂಕಿನಲ್ಲಿ ಮಳೆಯಿಲ್ಲದೆ ಕೊಳವೆ ಬಾವಿಗಳು ಬತ್ತಿಹೋಗಿದ್ದು, ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ತುರ್ತು ಸಂದರ್ಭದಲ್ಲಿ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಆದರೆ ಸದರಿ ಕೊಳವೆ ಬಾವಿಗಳಿಗೆ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ. ಈ ಬಗ್ಗೆ ಕ್ರಮ ವಹಿಸಬೇಕೆಂದು ಕೋರಿದರು. | ಸಭೆಯಲ್ಲಿ ಕುಡಿಯುವ ನೀರಿನ ಯೋಜನೆಗಳಿಗೆ ಸಂಬಂಧಿಸಿದಂತೆ, ಸುದೀರ್ಘವಾಗಿ ಚರ್ಚಿಸ ಲಾಯಿತು.<br>ತೀವ್ರ ಕುಡಿಯುವ ನೀರಿನ ಸಮಸ್ಯೆ ಯನ್ನು ಪರಿಹರಿಸುವ ನಿಟ್ಟಿನಲ್ಲಿ ಟಾಸ್ಕ್ ಫೋರ್ಸ್ ಅಡಿಯಲ್ಲಿ ಶಾಸಕರುಗಳಿಗೆ ಬಿಡುಗಡೆ ಮಾಡುವ ಅನುದಾನವನ್ನು ಹೊರತುಪಡಿಸಿ, ಪ್ರತ್ಯೇಕವಾಗಿ ಜಿಲ್ಲಾ ಪಂಚಾಯಿತಿಗೆ ರೂ.1.00ಕೋಟಿಗಳ (ರೂಪಾಯಿ ಒಂದು ಕೋಟಿಗಳು ಮಾತ್ರ)ಗಳ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.<br>ಹಾಸನ ಜಿಲ್ಲೆ, ಸಕಲೇಶಪುರ ತಾಲ್ಲೂಕು ಎತ್ತಿನಹಳ್ಳದಿಂದ ಬೇರೆ ಜಿಲ್ಲೆಗಳಿಗೆ ಕುಡಿಯುವ ನೀರಿನ ಪೂರೈಕೆ ಯೋಜನೆಯಡಿ ಹಾಸನ ಜಿಲ್ಲೆಗೂ ಸಹ ಕುಡಿಯುವ ನೀರಿನ ಸೌಲಭ್ಯವನ್ನು ಕಲ್ಪಿಸುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಯನ್ನು ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |

| | | | |
|---|---|---|---|
| 7 | ದಿನಾಂಕ: 19-03-2012ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸುವ ಬಗ್ಗೆ | ದಿನಾಂಕ: 19-03-2012ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಮಾನ್ಯ ಸಮಿತಿ ಅಧ್ಯಕ್ಷರಾದ ಶ್ರೀ.ಎಂ.ಕೆ.ದ್ಯಾವಯ್ಯ ರವರು ಸಭೆಗೆ ಮಂಡಿಸಿದರು. ಮಾನ್ಯ ಸದಸ್ಯರಾದ ಶ್ರೀಮತಿ ಪಾರ್ವತಮ್ಮರವರು ಅನುಮೋದಿಸಿದರು. | ಸಮಗ್ರ ಚರ್ಚೆಯ ನಂತರ ದಿ:19-03-2012ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು |
| 8 | ದಿನಾಂಕ: 19-04-2012ರಂದು ನಡೆದ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸುವ ಬಗ್ಗೆ | ದಿನಾಂಕ: 19-04-2012ರಂದು ನಡೆದ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಮಾನ್ಯ ಸಮಿತಿ ಅಧ್ಯಕ್ಷರಾದ ಶ್ರೀ ಹುಚ್ಚೇಗೌಡರವರು ಸಭೆಗೆ ಮಂಡಿಸಿದರು. ಮಾನ್ಯ ಸದಸ್ಯರಾದ ಶ್ರೀ ವಿ.ಎ.ನಂಜುಂಡಸ್ವಾಮಿರವರು ಅನುಮೋದಿಸಿದರು. | ಸಮಗ್ರವಾಗಿ ಚರ್ಚಿಸಿದ ನಂತರ ದಿ:19-04-2012 ರಂದು ನಡೆದ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |
| 9 | ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿಗೆ ಅಧ್ಯಕ್ಷರು/ ಸದಸ್ಯರನ್ನು ಆಯ್ಕೆ ಮಾಡಿರುವುದನ್ನು ಅನುಮೋದಿಸುವ ಬಗ್ಗೆ | ಟಿಪ್ಪಣಿ ಸಂಖ್ಯೆ: ಜಿಪಂಹಾ/ಪ.ಶಾ/9/2012-13 ದಿ: 07-05-2012ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ದಿನಾಂಕ: 29-03-2012ರಂದು ನಡೆದ ಜಿಲ್ಲಾ ಪಂಚಾಯಿತಿ ವಿಶೇಷ ಸಭೆಯಲ್ಲಿ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿಗೆ ಅಧ್ಯಕ್ಷರನ್ನು ಆಯ್ಕೆ ಮಾಡುವ ಅಧಿಕಾರವನ್ನು ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ ನೀಡಲು ನಿರ್ಣಯಿಸಲಾಗಿತ್ತು. ಅದರಂತೆ, ಮಾನ್ಯ ಅಧ್ಯಕ್ಷರು ಶ್ರೀ ಸ್ವಾಮಿಗೌಡರವರನ್ನು ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿಯ ಅಧ್ಯಕ್ಷರನ್ನಾಗಿ ಮತ್ತು ಶ್ರೀಮತಿ ಶಾಂತಮ್ಮರವರನ್ನು ಹೊಸ ಸದಸ್ಯರನ್ನಾಗಿ ಆಯ್ಕೆ ಮಾಡಿರುತ್ತಾರೆ. ಸಭೆಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿಗೆ ಅಧ್ಯಕ್ಷರನ್ನಾಗಿ ಶ್ರೀ ಸ್ವಾಮಿಗೌಡರವರನ್ನು ಮತ್ತು ಶ್ರೀಮತಿ ಶಾಂತಮ್ಮರವರನ್ನು ಹೊಸ ಸದಸ್ಯರನ್ನಾಗಿ ಮಾನ್ಯ ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ, ಹಾಸನ ಇವರು ಆಯ್ಕೆ ಮಾಡಿರುವುದಕ್ಕೆ ಅನುಮೋದಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 10 | ಸ್ವಾಮಿ ವಿವೇಕಾನಂದ ಯೂತ್ ಮೂವ್ ಮೆಂಟ್ ಯೋಜನೆ 1947 ಪ್ರಾಜೆಕ್ಟ್ ಅನ್ನು ಮಕ್ಕಳ ಕಲಿಕಾ ಗುಣ ಮಟ್ಟವನ್ನು ಹೆಚ್ಚಿಸುವ ಸಲು | ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಪ್ರಸಕ್ತ ಸಾಲಿನಲ್ಲಿ ಹಾಸನ ಜಿಲ್ಲೆಯು ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶದಲ್ಲಿ ರಾಜ್ಯಕ್ಕೆ 3ನೇ ಸ್ಥಾನವನ್ನು ಪಡೆದಿರುವ ಬಗ್ಗೆ ಶಿಕ್ಷಣ ಇಲಾಖೆಯ ಉಪನಿರ್ದೇಶಕರು/ ಕ್ಷೇತ್ರ ಶಿಕ್ಷಣಾಧಿಕಾರಿಗಳು/ಶಿಕ್ಷಕರುಗಳಿಗೆ ಅಭಿನಂದನೆಯನ್ನು ತಿಳಿಸಿದರು. ಮತ್ತು 2011-12ನೇ ಸಾಲಿನಲ್ಲಿ ವಿವೇಕಾನಂದ ಯೂತ್ ಮೂವ್ ಮೆಂಟ್ ವತಿಯಿಂದ 1947 ಪ್ರಾಜೆಕ್ಟ್ ಅನ್ನು ಅನುಷ್ಠಾನ ಮಾಡಿದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಫಲಿತಾಂಶವು ಹಿಂದಿನ ಸಾಲಿಗೆ ಹೋಲಿಸಿದಲ್ಲಿ ಹೆಚ್ಚಿನ ಪ್ರಗತಿಯಾಗಿರುವುದು ಕಂಡುಬಂದಿರುತ್ತದೆ. ಆದ್ದರಿಂದ, | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>2012-13ನೇ ಸಾಲಿನಲ್ಲಿ ಜಿಲ್ಲೆಯ 8 ತಾಲ್ಲೂಕುಗಳಲ್ಲಿ ಒಟ್ಟು 240 ಪ್ರೌಢಶಾಲೆಗಳಲ್ಲಿ 1947 ಪ್ರಾಜೆಕ್ಟ್ ಅನ್ನು ವಿವೇಕಾನಂದ ಯೂತ್ |

| | | | |
|---|---|---|---|
| 2 | ದಿನಾಂಕ: 27-01-2012ರಂದು ನಡೆದ ಸಾಮಾನ್ಯ ಸಭೆಯ ನಡವಳಿಗಳನ್ನು ಅಂಗೀಕರಿಸುವ ಕುರಿತು. | ದಿನಾಂಕ: 27-01-2012 ರಂದು ನಡೆದ ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯ ನಡವಳಿಗಳನ್ನು ಅಂಗೀಕರಿಸುವಂತೆ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಆರ್.ಸತ್ಯನಾರಾಯಣರವರು ಸಭೆಯನ್ನು ಕೋರಿದರು. | ಸಭೆಯಲ್ಲಿ ಸಮಗ್ರವಾಗಿ ಚರ್ಚಿಸಿದ ನಂತರ ದಿ:27-01-2012 ರಂದು ನಡೆದ ಸಾಮಾನ್ಯ ಸಭೆಯ ನಡವಳಿಗಳನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು. |
| 3 | ದಿನಾಂಕ; 29-03-2012ರಂದು ನಡೆದ ವಿಶೇಷ ಸಭೆಯ ನಡವಳಿಗಳನ್ನು ಅಂಗೀಕರಿಸುವ ಬಗ್ಗೆ. | ದಿನಾಂಕ: 29-03-2012ರಂದು ನಡೆದ ಜಿಲ್ಲಾ ಪಂಚಾಯಿತಿ ವಿಶೇಷ ಸಭೆಯ ನಡವಳಿಗಳನ್ನು ಸಭೆಗೆ ಮಂಡಿಸುತ್ತಾ, ಅಂಗೀಕರಿಸುವಂತೆ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಆರ್. ಸತ್ಯನಾರಾಯಣರವರು ಸಭೆಯನ್ನು ಕೋರಿದರು. | ಸಭೆಯಲ್ಲಿ ವಿಷಯದ ಬಗ್ಗೆ ಸುಧೀರ್ಘವಾಗಿ ಚರ್ಚಿಸಿದ ನಂತರ ದಿನಾಂಕ: 29-03-2012ರಂದು ನಡೆದ ವಿಶೇಷ ಸಭೆಯ ನಡವಳಿಗಳನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು. |
| 4 | ದಿನಾಂಕ: 02-04-2012ರಂದು ನಡೆದ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸುವ ಬಗ್ಗೆ | ದಿನಾಂಕ: 02-04-2012ರಂದು ನಡೆದ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಆರ್.ಸತ್ಯನಾರಾಯಣರವರು ಸಭೆಗೆ ಮಂಡಿಸಿದರು. ಮಾನ್ಯ ಸದಸ್ಯರಾದ ಶ್ರೀ ಎನ್.ಡಿ.ಕಿಶೋರ್ ರವರು ಸಭಾ ನಡವಳಿಗಳನ್ನು ಅನುಮೋದಿಸಿದರು. | ಸಮಗ್ರ ಚರ್ಚೆಯ ನಂತರ ದಿ: 02-04-2012 ರಂದು ನಡೆದ ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |
| 5 | ದಿನಾಂಕ: 26-03-2012ರಂದು ನಡೆದ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸುವ ಬಗ್ಗೆ. | ದಿನಾಂಕ:26-03-2012ರಂದು ನಡೆದ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಶ್ರೀಮತಿ ಸುಲೋಚನಾ ರಾಮಕೃಷ್ಣರವರು ಸಭೆಗೆ ಮಂಡಿಸಿದರು. ಶ್ರೀಮತಿ ಕುಸುಮ ಬಾಲಕೃಷ್ಣರವರು ಸಭೆಯ ನಡವಳಿಗಳನ್ನು ಅನುಮೋದಿಸಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ದಿನಾಂಕ: 26-03-2012ರಂದು ನಡೆದ ಸಾಮಾನ್ಯಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 6 | ದಿನಾಂಕ: 26-03-2012ರಂದು ನಡೆದ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸುವ ಬಗ್ಗೆ . | ದಿನಾಂಕ: 26-03-2012ರಂದು ನಡೆದ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಶ್ರೀಮತಿ ಹೇಮಾವತಿ ಮಂಜುನಾಥ್ ರವರು ಸಭೆಗೆ ಮಂಡಿಸಿದರು. ಮಾನ್ಯ ಸದಸ್ಯರಾದ ಶ್ರೀ ಸ್ವಾಮಿಗೌಡರವರು ಅನುಮೋದಿಸಿದರು. | ದಿ:26-03-2012 ರಂದು ನಡೆದ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಸಭೆಯಲ್ಲಿ ಸರ್ವಾನುಮತದಿಂದ ಅನುಮೋದಿಸಲಾಯಿತು. |

# ದಿನಾಂಕ: 14-06-2012ರಂದು ಪೂರ್ವಾಹ್ನ:11-30 ಗಂಟೆಗೆ ಹೊಯ್ಸಳ ಸಭಾಂಗಣ, ಜಿಲ್ಲಾ ಪಂಚಾಯತ್, ಹಾಸನ ಇಲ್ಲಿ ನಡೆದ ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯ ನಡವಳಿಗಳು

**ಅಧ್ಯಕ್ಷತೆ: ಶ್ರೀ ಬಿ.ಆರ್.ಸತ್ಯನಾರಾಯಣ,**

**ಆಧ್ಯಕ್ಷರು,**

**ಜಿಲ್ಲಾ ಪಂಚಾಯತ್, ಹಾಸನ.**

ಹಾಜರಿ: 46

ಗೈರು ಹಾಜರಿ:12

<table>
<tr><th>ಕ್ರಸಂ</th><th>ವಿಷಯ</th><th>ಚರ್ಚೆ</th><th>ತೀರ್ಮಾನ</th></tr>
<tr><td></td><td></td><td>ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಸಭೆಗೆ ಮಾನ್ಯ ಅಧ್ಯಕ್ಷರು, ಮಾನ್ಯ ಉಪಾಧ್ಯಕ್ಷರು, ಮಾನ್ಯ ಜಿಲ್ಲಾ ಪಂಚಾಯಿತಿ ಸದಸ್ಯರುಗಳು, ತಾಲ್ಲೂಕು ಪಂಚಾಯಿತಿ ಮಾನ್ಯ ಅಧ್ಯಕ್ಷರುಗಳು, ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಪತ್ರಿಕಾ ಮಾಧ್ಯಮದವರನ್ನು ಸ್ವಾಗತಿಸುತ್ತಾ, ಅಧ್ಯಕ್ಷತೆ ವಹಿಸಿ ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಅಧ್ಯಕ್ಷರನ್ನು ಕೋರಿದರು.</td><td></td></tr>
<tr><td>1</td><td>2012-13ನೇ ಸಾಲಿನ ಆಯವ್ಯಯ ಮಂಡನೆ ಬಗ್ಗೆ</td><td>ಮಾನ್ಯ ಅಧ್ಯಕ್ಷರು, 2012-13ನೇ ಸಾಲಿನ ಹಾಸನ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಆಯವ್ಯಯ ಅಂದಾಜುಗಳನ್ನು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಕಲಂ 256ರ ಅನ್ವಯ ಕೆಳಕಂಡಂತೆ ಮಂಡಿಸುತ್ತಾ, ಸಭೆಯು ಆಯವ್ಯಯ ಅಂದಾಜುಗಳಿಗೆ ಅನುಮೋದನೆ ನೀಡಬೇಕೆಂದು ಕೋರಿದರು.<br>2012-13ನೇ ಸಾಲಿಗೆ ನಿಗದಿಯಾಗಿರುವ ಅನುದಾನ (ರೂ.ಲಕ್ಷಗಳಲ್ಲಿ)<table><tr><th>ಕ್ರಸಂ</th><th>ವಿವರ</th><th>ಮೊತ್ತ</th></tr><tr><td>1</td><td>ರಾಜ್ಯ ಯೋಜನೆ</td><td>10,972.26</td></tr><tr><td>2</td><td>ಕೇಂದ್ರ ಯೋಜನೆ</td><td>6,796.33</td></tr><tr><td>3</td><td>ಯೋಜನೇತರ</td><td>36,633.71</td></tr><tr><td></td><td>ಒಟ್ಟು</td><td>54,402.30</td></tr></table></td><td>ಸಭೆಯಲ್ಲಿ ವಿಷಯದ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು.<br>ಈ ಕೆಳಗೆ ವಿವರಿಸಿರುವಂತೆ 2012-13ನೇ ಸಾಲಿನ ಹಾಸನ ಜಿಲ್ಲಾ ಪಂಚಾಯಿತಿಯ ಆಯವ್ಯಯ ಅಂದಾಜುಗಳಿಗೆ ಅನುಮೋದನೆಯನ್ನು ನೀಡಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.<br>ರೂ.ಲಕ್ಷಗಳಲ್ಲಿ<table><tr><th>ಕ್ರಸಂ</th><th>ವಿವರ</th><th>ಮೊತ್ತ</th></tr><tr><td>1</td><td>ರಾಜ್ಯ ಯೋಜನೆ</td><td>10,972.26</td></tr><tr><td>2</td><td>ಕೇಂದ್ರ ಯೋಜನೆ</td><td>6,796.33</td></tr><tr><td>3</td><td>ಯೋಜನೇತರ</td><td>36,633.71</td></tr><tr><td></td><td>ಒಟ್ಟು</td><td>54,402.30</td></tr></table></td></tr>
</table>

3. ಮಾನ್ಯ ಲೋಕಸಭಾ ಸದಸ್ಯರು,ಹಾಸನ ಜಿಲ್ಲೆ, ಹಾಸನ ಇವರಿಗೆ ದಯಾಪರ ಅವಗಾಹನೆಗೆ ಸಲ್ಲಿಸಿದೆ.
4. ಹಾಸನ ಜಿಲ್ಲೆಯ ಎಲ್ಲಾ ಮಾನ್ಯ ವಿಧಾನ ಸಭಾ ಮತ್ತು ವಿಧಾನ ಪರಿಷತ್ ಸದಸ್ಯರುಗಳಿಗೆ ಮಾಹಿತಿಗಾಗಿ ಸಲ್ಲಿಸಿದೆ
5. ಹಾಸನ ಜಿಲ್ಲಾ ಪಂಚಾಯತ್, ಮಾನ್ಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಆಪ್ತಶಾಖೆಗೆ ಮಾಹಿತಿಗಾಗಿ ಸಲ್ಲಿಸಿದೆ.
6. ಹಾಸನ ಜಿಲ್ಲೆಯ ಎಲ್ಲಾ ಮಾನ್ಯ ಜಿಲ್ಲಾ ಪಂಚಾಯಿತಿ ಸದಸ್ಯರುಗಳಿಗೆ ಸಭೆಗೆ ಹಾಜರಾಗಲು ಕೋರಿದೆ.
7. ಹಾಸನ ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರುಗಳಿಗೆ
8. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಆಪ್ತಶಾಖೆ, ಜಿಲ್ಲಾ ಪಂಚಾಯಿತಿ, ಹಾಸನ.
9. ಉಪ ಕಾರ್ಯದರ್ಶಿ( ಆಡಳಿತ), ಜಿಲ್ಲಾ ಪಂಚಾಯಿತಿ, ಹಾಸನ.
10. ಉಪ ಕಾರ್ಯದರ್ಶಿ(ಅಭಿವೃದ್ಧಿ), ಜಿಲ್ಲಾ ಪಂಚಾಯಿತಿ, ಹಾಸನ.
11. ಮುಖ್ಯ ಲೆಕ್ಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಹಾಸನ.
12. ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯಿತಿ, ಹಾಸನ.
13. ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ
14. ಕಾರ್ಯ ನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಮತ್ತು ಚನ್ನರಾಯಪಟ್ಟಣ
15. ಉಪ ನಿರ್ದೇಶಕರು, ಕರ್ನಾಟಕ ಮೂಲ ಸೌಕರ್ಯಗಳ ಇಲಾಖೆ, ಹಾಸನ.
16. ಕಛೇರಿ ಪ್ರತಿ.

# ಜಿಲ್ಲಾ ಪಂಚಾಯಿತಿ, ಹಾಸನ.

ಸಂಖ್ಯೆ: ಜಿಪಂಹಾ/ಪ.ಶಾ/7 /2012-13 ದಿನಾಂಕ: 06-06-2012

## ಸಭಾಹ್ವಾನ ಪತ್ರ

ದಿನಾಂಕ: **14-06-2012**ರಂದು **ಗುರುವಾರ** ಬೆಳಿಗ್ಗೆ: **11-30** ಗಂಟೆಗೆ ಶ್ರೀ ಬಿ.ಆರ್.ಸತ್ಯನಾರಾಯಣ, ಮಾನ್ಯ ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ, ಹಾಸನ ಇವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯನ್ನು ಹೊಯ್ಸಳ ಸಭಾಂಗಣದಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರುಗಳು ಸಭೆಗೆ ಸಕಾಲದಲ್ಲಿ ಹಾಜರಾಗಲು ಕೋರಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯಿತಿ, ಹಾಸನ.

**ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು:**

1. ದಿನಾಂಕ: 27-01-2012ರಂದು ನಡೆದ ಸಾಮಾನ್ಯ ಸಭೆಯ ನಡವಳಿಗಳನ್ನು ಅಂಗೀಕರಿಸುವ ವಿಚಾರ
2. ದಿನಾಂಕ: 29-03-2012ರಂದು ನಡೆದ ವಿಶೇಷ ಸಭೆಯ ನಡವಳಿಗಳನ್ನು ಅಂಗೀಕರಿಸುವ ವಿಚಾರ
3. **ದಿನಾಂಕ: 02-04-2012ರಂದು ನಡೆದ ಹಣಕಾಸು, ಲೆಕ್ಕಪರಿಶೋಧನೆ** ಮತ್ತು **ಯೋಜನಾ ಸ್ಥಾಯಿ** ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸುವ ವಿಚಾರ
4. ದಿನಾಂಕ: 26-03-2012ರಂದು ನಡೆದ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸುವ ವಿಚಾರ
5. ದಿನಾಂಕ: 26-03-2012ರಂದು ನಡೆದ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸುವ ವಿಚಾರ
6. ದಿನಾಂಕ: 19-04-2012ರಂದು ನಡೆದ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸುವ ವಿಚಾರ
7. ದಿನಾಂಕ: 19-03-2012ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸುವ ವಿಚಾರ
8. 2012-13ನೇ ಸಾಲಿನ ಆಯವ್ಯಯ ಮಂಡನೆ
9. ಸ್ವಾಮಿ ವಿವೇಕಾನಂದ ಯೂತ್ ಮೂವ್ ಮೆಂಟ್ ಯೋಜನೆ-1947 ಕಾರ್ಯಕ್ರಮವನ್ನು ಮಕ್ಕಳ ಕಲಿಕಾ ಗುಣಮಟ್ಟವನ್ನು ಹೆಚ್ಚಿಸುವ ಸಲುವಾಗಿ ಜಿಲ್ಲೆಯಾದ್ಯಂತ ಇರುವ ಸರ್ಕಾರಿ ಪ್ರೌಢಶಾಲೆಗಳಲ್ಲಿ ಅನುಷ್ಠಾನಗೊಳಿಸುವ ಬಗ್ಗೆ

**ಅಧ್ಯಕ್ಷರ ಅಪ್ಪಣೆ ಮೇರೆಗೆ ವಿಷಯಗಳು**

ಪ್ರತಿಯನ್ನು:

1. ಮಾನ್ಯ ವಸತಿ ಸಚಿವರು ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಸಚಿವರ ಆಪ್ತಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತರಲು ಕೋರಿದೆ.
2. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ದಯಾಪರ ಅವಗಾಹನೆಗೆ ಸಲ್ಲಿಸಿದೆ.